
ಈ ಕಾದಂಬರಿಯಲ್ಲಿ ಕವಿ ಪೆಸೋಅ ಜನ್ಮನೀಡಿದ ಪಾತ್ರವೊಂದರ ಕತೆಯಿದೆ, ನಿಜ. ಈ ಹಿನ್ನೆಲೆಯನ್ನರಿಯದ ಓದುವವರಿಗೆ ಕೂಡ ಇದು ಕಳೆದ ಶತಮಾನದ ಮೂರನೆಯ ದಶಕದ ಯೂರೋಪಿನ ಬಗೆಗೆ ಬೇರೆಲ್ಲೂ ಸಿಕ್ಕದ ಒಳನೋಟಗಳನ್ನು ಒದಗಿಸುವ ಕೃತಿಯಾಗಿದೆ.

ನನಗೀಗ ನಮ್ಮ ನವ್ಯರ ಕಾಲದ ಒಂದು 'ಪ್ರಸಂಗ' ನೆನಪಾಗುತ್ತಿದೆ. ಅದು ಮೈಸೂರಿನ ಬಿ.ಎನ್. ಶ್ರೀರಾಮ 'ಲಹರಿ' ತ್ರೈಮಾಸಿಕವನ್ನು ಸಂಪಾದಿಸುತ್ತಿದ್ದ ಕಾಲ. ಅದರ ಒಂದು ಸಂಚಿಕೆಯಲ್ಲಿ ನಳಿನಿ ದೇಶಪಾಂಡೆ ಎಂಬುವರು ಬರೆದ ಒಂದು ಕವಿತೆ ಇತ್ತು. ಅದರ ಬಗ್ಗೆ ವಿ.ಸೀ. ಅವರು ಈಚೆಗೆ ಬಹು ಚೆನ್ನಾದ ಒಂದು ಕವಿತೆ ಬಂದಿದೆ: ಒಂದು ಹೆಣ್ಣುಮಗುವಿನ ಹೆಸರು ಹಾಕಿ ಬರೆದಿರುವುದು. ಸ್ವಾತಂತ್ರ್ಯವನ್ನು ಬಯಸಿದ ಆ ಹೆಣ್ಣುಮಗು ಲ್ಯಾಂಬ್ರೆಟಾ–ವೆಸ್ಪಾ ಸವಾರಿ ಮಾಡುತ್ತ ರಸ್ತೆ ಸೀಳಿಕೊಂಡು ನುಗ್ಗಿ ಹೋಗುವ ಯುವಕನ ಸೊಂಟ ಕಟ್ಟಿಕೊಂಡು ಹೋಗುವ ಆಸೆಯನ್ನು ಬಹು ಚೆನ್ನಾಗಿ ವರ್ಣಿಸುತ್ತದೆ ಎಂದು ಬರೆದರು – ತಮ್ಮ 'ಅರಲು ಬರಲು' ಕವನ ಸಂಕಲನದ 'ಮೊದಲು ಮಾತು'ವಿನಲ್ಲಿ. ನನಗಿನ್ನೂ ನೆನಪಿರುವ ಆ ಕವಿತೆಯ ಒಂದೇ ಒಂದು ಸ್ಟಾಂಜಾ ಇದು:

ತುಂಟ ಹುಡುಗನ ಸೊಂಟಾ ಸುತ್ತಿ
ಲ್ಯಾಂಬ್ರೆಟಾ ವೆಸ್ಪಾ ಬೆನ್ನನು ಹತ್ತಿ
ಕೀಲುಕುದುರೆ ರಾಜಕುಮಾರಿ
ಒಮ್ಮೆಯಾದರೂ ಆದೇನು
ನರಕಕ್ಕೂ ಹೋದೇನು.


ವಿ.ಕೃ. ಗೋಕಾಕ

ಈ ನಳಿನಿ ದೇಶಪಾಂಡೆ ನಿಜಕ್ಕೂ ಯಾರು ಎಂದು ತಿಳಿಯಬಯಸಿದವರಲ್ಲಿ ಸುಮತೀಂದ್ರ ನಾಡಿಗರು ಅಗ್ರಗಣ್ಯರೇನೊ. ಅವರು ಆಕೆ ಹೆಣ್ಣಲ್ಲ, ಗಂಡಿರಬೇಕು ಎಂದು ಅನುಮಾನಪಟ್ಟರಲ್ಲದೆ, ಅದು ಹೇಗೋ 'ಆಕೆ' ಪೂರ್ಣಚಂದ್ರ ತೇಜಸ್ವಿಯವರೇ ಎಂದು ಕಂಡುಹಿಡಿದರು. (ಈ ಆಪಾದನೆಯನ್ನು ತೇಜಸ್ವಿಯವರು ಅಲ್ಲಗಳೆದರೋ ಇಲ್ಲವೋ ನನಗೆ ಗೊತ್ತಿಲ್ಲ.) ಅಷ್ಟೇ ಸಾಲದೆಂದು ನಳಿನಿ ದೇಶಪಾಂಡೆಗೆ ಸವಾಲು ಹಾಕುವಂತೆ 'ಲೀಲಾ ರಾವ್' ಹೆಸರಿನಲ್ಲಿ ಇಪ್ಪತ್ಮೂರು ಕವನಗಳನ್ನೂ ಬರೆದರು. ಅವು ನಾಡಿಗರ 'ಉದ್ಘಾಟನೆ' ಎಂಬ ಕವನ ಸಂಕಲನದ ಎರಡನೆಯ ಭಾಗವಾಗಿವೆ. ಕುತೂಹಲಿಗಳು ಅಲ್ಲಿರುವ 'ಥೂ ಹೋಗೇ, ಪೋಲಿ ಕಣೆ ನೀನು' ಎಂಬ ಈ ಕವನವನ್ನು ಓದಿಕೊಳ್ಳಬಹುದು:

ಕೂತುಕೊಳ್ಳೇ ಕಮಲ, ಅಲ್ಲೇಕೆ
ಇಲ್ಲೆ ಬಾ, ಕೋಣೆಬಾಗಿಲ ಮುಚ್ಚು.
ಈಗ ತಾನೆ ಸ್ನಾನ ಮುಗಿಸಿದೆ ಕಣೆ.
ಮೈಯೆಲ್ಲ ಸ್ಯಾಂಡಲ್ ಸೋಪು ಘಮ ಘಮ;